ಕಲ್ಪಿಸಲಾಗುವುದು.

ಇ) ನಿಗಮವು ರಾಜ್ಯಾದ್ಯಂತ ಉಪ ವಿಭಾಗೀಯ ಮಟ್ಟದಲ್ಲಿದ್ದ ಎಲ್ಲಾ ಉಗ್ರಾಣಗಳನ್ನು ಅವುಗಳ ಸಂಬಂಧಪಟ್ಟ ವಿಭಾಗೀಯ ಉಗ್ರಾಣಗಳೊಂದಿಗೆ ವಿಲೀನಗೊಳಿಸಿದೆ. ನಿಗಮದ ಆಡಳಿತಾತ್ಮಕ ಹಿತದೃಷ್ಟಿಯಿಂದ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ಈ ಕ್ರಮದಿಂದ ಸಾರ್ವಜನಿಕರಿಗೆ ತೊಂದರೆ ಆಗದಂತೆ ಎಚ್ಚರ ವಹಿಸಲಾಗಿದೆ. ಉಪ ವಿಭಾಗಗಳ ವ್ಯಾಪ್ತಿಯಲ್ಲೇ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳಿಗೆ ಅಗತ್ಯವಿರುವ ಸಾಮಾಗ್ರಿಗಳನ್ನು ಅವುಗಳ ಸಂಬಂಧಪಟ್ಟ ವಿಭಾಗೀಯ ಉಗ್ರಾಣಗಳಿಂದ ಪೂರೈಸಲಾಗುವುದು. ಉಡುಪಿಯಲ್ಲಿ ವಿಭಾಗೀಯ ಉಗ್ರಾಣವಿದ್ದು ಈ ಉಗ್ರಾಣದಿಂದ ಜಿಲ್ಲೆಯ ಎಲ್ಲಾ ತಾಲ್ಲೂಕಿನ ನಿಗಮದ ಉಪ ವಿಭಾಗಗಳಿಗೆ ಸಾಮಗ್ರಿ ಸಲಕರಣೆಗಳನ್ನು ಒದಗಿಸಲಾಗುತ್ತಿದೆ. ಉಪ ವಿಭಾಗೀಯ ಮಟ್ಟದಲ್ಲಿದ್ದ ಉಗ್ರಾಣಗಳೊಂದಿಗೆ ವಿಲೀನಗೊಳಿಸುವ ನಿರ್ಧಾರವನ್ನು ಸಮಗ್ರ ರೀತಿಯಲ್ಲಿ ಪರಿಶೀಲಿಸಿದ ನಂತರವೇ ರಾಜ್ಯಾದ್ಯಂತ ಒಂದೇ ರೀತಿಯಲ್ಲಿ ಪರಿಶೀಲಿಸಿದ ನಂತರವೇ ರಾಜ್ಯಾದ್ಯಂತ ಒಂದೇ ರೀತಿಯಲ್ಲಿ ಅನುಷ್ಠಾನಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಆದಾಗ್ಯೂ ಅತಿ ಅವಶ್ಯಕ 12 ಸಾಮಾಗ್ರಿಗಳ ಕನಿಷ್ಠ ದಾಸ್ತಾನನ್ನು ಕಾರ್ಕಳ ಮತ್ತು ಕುಂದಾಪುರ ಉಪ ವಿಭಾಗೀಯ ಕೇಂದ್ರಗಳಲ್ಲಿ ದಾಸ್ತಾನು ಇಡಲು ಸೂಚಿಸಿದ್ದು ಬಳಕೆದಾರರಿಗೆ ತೊಂದರೆಯಾಗದಂತೆ ಕ್ರಮ ತೆಗೆದುಕೊಳ್ಳಲಾಗಿದೆ.

ಹುಬ್ಬಳ್ಳಿ-ಧಾರವಾಡ ನಗರವಲ್ಲಿ ಸಶಸ್ತ್ರ ಮಿಸಲು ಪಡೆಯನ್ನು ಬಲಪಡಿಸುವ ಬಗ್ಗೆ.

2230(ವಿಧಾಪ)

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿಗ್ರಾಮಾಣ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಸಶಸ್ತ್ರ ಮಿಸಲು ಪೋಲೀಸ್ ಪಡೆಯನ್ನು ಬಲಪಡಿಸಲು ಉದ್ದೇಶಿಸಲಾಗಿದೆಯೆ. ಈ ಉದ್ದೇಶಕ್ಕಾಗಿ ಎಷ್ಟು ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲಾಗುವುದು.

ಆ) ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಅಪರಾಧ ತಡೆ ಮತ್ತು ಗಸ್ತು ದಳಕ್ಕಾಗಿ ಹೊಯ್ಸಳ ಮಾದರಿಯ ಎಷ್ಟು ಜೀಪುಗಳನ್ನು ಖರೀದಿಸಲಾಗುವುದು.

ಇ) ಹುಬ್ಬಳ್ಳಿಯ ಅಶೋಕ ನಗರ ಪೋಲೀಸ್ ಔಟ್‌ಪೋಸ್ಟ್ ಠಾಣೆಯನ್ನು ಪೂರ್ಣ ಪ್ರಮಾಣದ ಪೊಲೀಸ್ ಠಾಣೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾಪ ಸರ್ಕಾರದ

ಮುಂದಿದೆಯೆ.

ಈ) ಅತಿ ಗಣ್ಯರ ಭೇಟಿಯ ಸಮಯದಲ್ಲಿ ರಕ್ಷಣೆಗೋಸ್ಕರ ಎಷ್ಟು ವಾಹನಗಳಿವೆ. ಎಷ್ಟು ವಾಹನಗಳನ್ನು ಖರೀದಿಸುವ ಯೋಜನೆ ಇದೆ.

ಉ) ಹುಬ್ಬಳ್ಳಿ ನಗರದ ದಕ್ಷಿಣ ಟ್ರಾಫಿಕ್ ಪೊಲೀಸ್ ಠಾಣೆಯನ್ನು ಹೊಸದಾಗಿ ಸೃಷ್ಟಿಸುವ ಪ್ರಸ್ತಾಪ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

ಅ) ಹುಬ್ಬಳ್ಳಿ-ಧಾರವಾಡ ನಗರ ಸಶಸ್ತ್ರ ಮೀಸಲು ಪಡೆಯನ್ನು ಬಲಪಡಿಸುವ ಪ್ರಸ್ತಾವನೆಯನ್ನು ಚಾಲ್ತಿಯಲ್ಲಿರುವ ಮಿತವ್ಯಯ ಆದೇಶಗಳ ಹಿನ್ನೆಲೆಯಲ್ಲಿ ಪರಿಶೀಲಿಸಲಾಗುತ್ತಿದೆ.

ಆ) ಇಂತಹ ಪ್ರಸ್ತಾವ ಸದ್ಯಕ್ಕೆ ಸರ್ಕಾರದ ಮುಂದಿಲ್ಲವುದಿಲ್ಲ.

ಇ) ಪ್ರಸಕ್ತ ಆರ್ಥಿಕ ವರ್ಷದಲ್ಲಿ ೧೦ ಪೊಲೀಸ್ ಠಾಣೆಗಳನ್ನು ತೆರೆಯಲು ಉದ್ದೇಶಿಸಿದ್ದು, ಅವುಗಳನ್ನು ಯಾವ ಪ್ರದೇಶಗಳಲ್ಲಿ ತೆರೆಯಬೇಕೆಂಬ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಈ) ಅತಿ ಗಣ್ಯರ ರಕ್ಷಣೆಗೋಸ್ಕರವಾಗಿ ಪ್ರತ್ಯೇಕ ವಾಹನಗಳಿರುವುದಿಲ್ಲ. ವಾಹನಗಳನ್ನು ಖರೀದಿಸುವ ಪ್ರಸ್ತಾವ ಸದ್ಯಕ್ಕೆ ಸರ್ಕಾರದ ಮುಂದಿಲ್ಲ.

ಉ) ಮೇಲಿನ ಪ್ರಶ್ನೆ (ಇ)ಗೆ ನೀಡಿದ ಉತ್ತರ ಇದಕ್ಕೂ ಅನ್ವಯವಾಗುತ್ತದೆ.

ರಾಜ್ಯದಲ್ಲಿರುವ ಡಿಸ್ಟಿಲರಿಗಳ ಸಂಖ್ಯೆ.

2234(2771)

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಡಿಸ್ಟಿಲರಿಗಳ ಸಂಖ್ಯೆ ಎಷ್ಟು?

ಅವುಗಳ ಹೆಸರು ಮತ್ತು ವಿಳಾಸ ನೀಡಿ.

ಆ) ಈ ಡಿಸ್ಟಿಲರಿಗಳು ಯಾವ ಯಾವ ವರ್ಷದಲ್ಲಿ ಪ್ರಾರಂಭವಾಗಿವೆ? ಇವುಗಳ